# ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರ

ಯಾವುದೇ ಪ್ರದೇಶದ ಆರ್ಥಿಕಾಭಿವೃದ್ಧಿಯಲ್ಲಿ ಸಣ್ಣ ಹಾಗೂ ಸೂಕ್ಷ್ಮ ಉದ್ಯಮಗಳ ಪಾತ್ರ ಗಣನೀಯ. ಅಲ್ಲದೇ ಆರ್ಥಿಕ ಅಭಿವೃದ್ಧಿ ಚಕ್ರದಲ್ಲಿ ಸಣ್ಣ ಹಾಗೂ ಸೂಕ್ಷ್ಮ ಉದ್ಯಮಗಳು ಮುಖ್ಯವಾದ ಕೊಂಡಿಯಾಗಿರುತ್ತವೆ. ಸ್ವ-ಉದ್ಯೋಗ ಸೃಷ್ಟಿಸುವದರಿಂದ ಆಯಾ ಪ್ರದೇಶದಲ್ಲಿ ಉದ್ಯೋಗ ಅವಕಾಶಗಳು ಹೆಚ್ಚುವದರೊಂದಿಗೆ ಪರೋಕ್ಷವಾಗಿ ಕೃಷಿ ವಲಯಕ್ಕೂ ಸಹಾಯ ನೀಡಿದಂತಾಗುತ್ತದೆ. ಇದರಿಂದ, ಆ ಪ್ರದೇಶದ ಜನರ ಆರ್ಥಿಕ ಪರಿಸ್ಥಿತಿ ಸುಧಾರಣೆಗೊಳ್ಳುತ್ತದೆ. ಈ ಹಿನ್ನಲೆಯಲ್ಲಿ ಸ್ವ-ಉದ್ಯೋಗ ಕೈಗೊಳ್ಳಲು ವಿದ್ಯಾವಂತ ಯುವಕ / ಯುವತಿಯರಿಗೆ ಪ್ರೇರೆಪಣೆ ಮುಖಾಂತರ ಅವರುಗಳು ಉದ್ಯಮಶೀಲತೆಯತ್ತ ಒಲವು ತೋರಿಸುವಂತೆ ಮನವರಿಕೆ ಮಾಡಿಕೊಡುವುದು ಅಥವಾ ಸೂಕ್ತ ಮಾರ್ಗದರ್ಶನ ನೀಡುವುದು ಅತ್ಯಾವಶ್ಯಕವಿರುತ್ತದೆ. ನಿರುದ್ಯೋಗ ವಿದ್ಯಾವಂತ ಯುವಕ / ಯುವತಿಯರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಸ್ಥಾಪಿತ ಸರ್ಕಾರಗಳು ಹಾಗೂ ವಿವಿಧ ಸಂಸ್ಥೆಗಳು ಕಾರ್ಯೋನ್ಮುಖರಾಗಿ ಹಲವಾರು ಕಾರ್ಯಕ್ರಮಗಳ ಮೂಲಕ ಸಹಾಯ ಹಸ್ತವನ್ನು ನೀಡುತ್ತಿವೆ. ಅಂತೆಯೇ, ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲಿ ವಿದ್ಯಾವಂತ ಯುವಕ/ಯುವತಿಯರು ಆಸಕ್ತಿ ಹೊಂದಿರುವ ವಿಷಯಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಹಮ್ಮಿಕೊಂಡು ಅವರುಗಳ ಕೌಶಲ್ಯತೆಯನ್ನು ಉತ್ತಮಗೊಳಿಸಿ ಅವರಿನ್ನು ಸೂಕ್ತ ಉದ್ಯೋಗಗಳಿಗಾಗಿ ಅಣಿಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ವತಿಯಿಂದ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಹಲವಾರು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜರುಗಿಸುತ್ತಿದೆ. ಈ ತೆರನಾಗಿ ಹಮ್ಮಿಕೊಳ್ಳುತ್ತಿರುವ ಕೌಶಲ್ಯಾಭಿವೃದ್ಧಿ ತರಬೇತಿಗಳಲ್ಲಿ ಉದ್ಯಮಶೀಲತಾಭಿವೃದ್ಧಿ ಕುರಿತಾಗಿ ಪ್ರೇರೆಪಣಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಅವರುಗಳಿಗೆ ಉದ್ಯಮಶೀಲರಾಗುವ ನಿಟ್ಟಿನಲ್ಲಿಯೂ ಪ್ರೇರೆಪಿಸಬಹುದಾಗಿದೆ.

ಉದ್ಯಮಶೀಲತೆಯನ್ನು ಆಧಾರವಾಗಿಟ್ಟುಕೊಂಡು ನಮ್ಮ ರಾಜ್ಯದ ಯುವ ಜನತೆಯನ್ನು ಅಭ್ಯಸಿಸಲಾಗಿ, ಅವರೆಲ್ಲರ ಮೊದಲ ಆದ್ಯತೆ ನೌಕರಿ ಮಾಡುವುದೇ ಆಗಿರುತ್ತದೆ. ಉಳಿದಂತೆ ಸ್ವ-ಉದ್ಯೋಗಗಳನ್ನು ಪ್ರಾರಂಭಿಸಿದ ಉದ್ಯಮಶೀಲರನ್ನು ಅವಲೋಕಿಸಿದಾಗ ಕಂಡುಬಂದ ಅಂಶವೇನೆಂದರೆ ಅವರಲ್ಲಿ ಹೆಚ್ಚಿನವರು ನೌಕರಿ / ಉದ್ಯೋಗ ಸಿಗದೆ ಇರುವುದರಿಂದ ಬಲವಂತವಾಗಿ / ಅನಿವಾರ್ಯವಾಗಿ ಸ್ವ-ಉದ್ಯೋಗದತ್ತ ವಾಲಿರುವುದಾಗಿರುತ್ತದೆ. ಇದನ್ನೆ Forced Entrepreneurship ಎಂದು ಕರೆಯಲಾಗುತ್ತದೆ. ಈ ಹಿನ್ನಲೆಯಲ್ಲಿ ನಮ್ಮ ಯುವ ಜನತೆಯಲ್ಲಿ ಉದ್ಯಮಶೀಲತೆಯನ್ನು ಪ್ರಚೋದಿಸಿ ಅವರ ಮೊದಲ ಆದ್ಯತೆಯಾಗಿ ಉದ್ಯಮಶೀಲತೆಯತ್ತ ಪ್ರೇರೇಪಣೆಗೊಳಿಸುವುದು ಹಾಗೂ ಉದ್ಯಮಶಿಲರನ್ನಾಗಿ ಅಣಿಗೊಳಿಸುವುದು ಶಿಕ್ಷಣದ ಪ್ರಮುಖ ಅಂಶವಾಗಬೇಕಾಗಿದೆ.

ಬಹುತೇಕ ಯುವಕ/ಯುವತಿಯರು ಉದ್ಯೋಗವನ್ನರಿಸುವ ಅಥವಾ ಉದ್ಯೋಗವನ್ನು ಗಿಟ್ಟಿಸುವ ಪ್ರಮುಖ ಅಪೇಕ್ಷೆಯನ್ನು ಹೊಂದಿರುತ್ತಾರೆ ಆದರೂ ಅವರುಗಳಿಗೆ ಉದ್ಯಮಶೀಲತೆಯ ಬಗ್ಗೆಯೂ ಮಾಹಿತಿಯನ್ನು ನೀಡಿ ಪ್ರೇರೆಪಿಸಿದಲ್ಲಿ ಅವರು ಬರುವ/ನಂತರದ ದಿನಗಳಲ್ಲಿ ಈ ಅವಕಾಶದ ಬಗ್ಗೆಯೂ ಒಂದು ಯೋಚನೆಯನ್ನು ಮಾಡುವಂತಹ ಬುನಾದಿಯನ್ನು ನೀಡಬಹುದಾಗಿದೆ. ಹಾಗಾಗುವುದರಿಂದ ಅನಿವಾರ್ಯ ಪರಿಸ್ಥಿತಿಯನ್ನು ತಂದುಕೊಳ್ಳದೇ ಸುಗಮವಾಗಿ ಉದ್ಯಮಶೀಲತೆಯನ್ನು ಆಯ್ಕೆ ಮಾಡಿಕೊಳ್ಳುವ ಮನಸ್ಥಿತಿಯನ್ನು ನಿರ್ಮಾಣಗೊಳಿಸಬಹುದಾಗಿದೆ.

ದೇಶದಲ್ಲಿಯೇ ಪ್ರಾರಂಭಿಕ ಹಂತದಲ್ಲಿ ಸ್ಥಾಪನೆಗೊಂಡಿರುವ ರಾಜ್ಯಮಟ್ಟದ ಕೆಲವೇ ಕೆಲವು ಉದ್ಯಮಶೀಲತಾಭಿವೃದ್ಧಿ ಕೇಂದ್ರಗಳ ಪೈಕಿ ಒಂದಾಗಿರುವ ಹಾಗೂ ಸನ್ 1992ರ ಮೇ 15 ರಂದು ಪ್ರಾರಂಭಗೊಂಡಿರುವ ಕರ್ನಾಟಕ ರಾಜ್ಯ ಮಟ್ಟದ ಸಂಸ್ಥೆಯಾದ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡವು ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜರುಗಿಸುವಲ್ಲಿ ಮುಂಚೂಣಿಯಲ್ಲಿರುತ್ತದೆ. ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡವು ಕಳೆದ ಮೂರು ದಶಕಗಳಲ್ಲಿ ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆ, ತಾಲ್ಲೂಕುಗಳ ಮೂಲೆ ಮೂಲೆಗಳಲ್ಲಿ ಉದ್ಯಮಶೀಲತಾಭಿವೃದ್ಧಿ ಸಂಬಂಧಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಜ್ಯದ ಕೈಗಾರಿಕಾಭಿವೃದ್ಧಿಯಲ್ಲಿ ತನ್ನದೇ ಆದ ಜವಾಬ್ದಾರಿಯುತ ಪಾತ್ರವನ್ನು ವಹಿಸುತ್ತಾ ಬಂದಿದೆ. ಪ್ರಸ್ತುತ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದು, ಉನ್ನತ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ ನುರಿತ ಅನುಭವಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಹೊಂದಿದ್ದು, ಪ್ರತಿ ಜಿಲ್ಲೆಯಲ್ಲಿ ತನ್ನದೇ ಆದಂತಹ ಕಛೇರಿ ಹೊಂದಿದ್ದು ನುರಿತ ತರಬೇತುದಾರರನ್ನೂ ಸಹ ಹೊಂದಿರುತ್ತದೆ.

ಪ್ರಸ್ತುತ ಕೌಶಲ್ಯಾಭಿವೃದ್ಧಿ ತರಬೇತಿಗಳಲ್ಲಿ ಉದ್ಯಮಶೀಲತೆಯ ಕುರಿತಾಗಿ ಪ್ರೇರೇಪಿಸಲು ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು ಉತ್ಸುಕವಾಗಿರುತ್ತದೆ. ಆದುದರಿಂದ, ಈ ಪ್ರಸ್ತಾವನೆಯನ್ನು ಪ್ರಸ್ತುತ ಪಡಿಸಿದೆ ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿಗಳಲ್ಲಿ ಉದ್ಯಮಶೀಲತೆಯ ಕುರಿತಾದ ತಿಳುವಳಿಕೆಯನ್ನು ನೀಡುವದರಿಂದ ಒಟ್ಟಾರೆ ತರಬೇತಿ ಕಾರ್ಯಕ್ರಮದ ಮೌಲ್ಯವರ್ಧನೆಯಾಗುವುದು ನಿರ್ವಿವಾದಿತ.

ವಿದ್ಯಾವಂತ ನಿರುದ್ಯೋಗಿ ಯುವಕ / ಯುವತಿಯರು ಯೋಜನೆಯ ಮುಖ್ಯ ಭಾಗಿದಾರರಾಗಿದ್ದು, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ ಹಾಗೂ ಉದ್ಯಮಶೀಲತಾಭಿವೃದ್ಧಿ / ಕೈಗಾರಿಕಾಭಿವೃದ್ಧಿ ನಿರತ ಇಲಾಖೆ / ಸಂಘ / ಸಂಸ್ಥೆ / ನಿಗಮಗಳು ಇತರೇ ಭಾಗಿದಾರರಾಗಿರುತ್ತಾರೆ.

ಒಂದು ದಿನದಲ್ಲಿ ಹಲವು ಅಧಿವೇಶನಗಳ ಮುಖಾಂತರ ಈ ಕೆಳಕಂಡ ವಿಷಯಗಳನ್ನು ಮಂಡಿಸಲಾಗುವುದು.

1) ಉದ್ಯಮಶೀಲತೆ ಹಾಗೂ Start-up : ಪರಿಚಯ ಹಾಗೂ ಹಿನ್ನೆಲೆ
2) Charms of being an Entrepreneur - ಉದ್ಯಮಶೀಲನಾಗುವಲ್ಲಿಯ ಮಹತ್ವ ಹಾಗೂ ಆಕರ್ಷಣೆ
3) ವಿವಿಧ ಸರ್ಕಾರಿ ಇಲಾಖೆ / ಸಂಸ್ಥೆಗಳಿಂದ ಉದ್ಯಮ ಸ್ಥಾಪನೆಗೆ ದೊರಕುವ ಬೆಂಬಲ.
4) ಯಶಸ್ವಿ ಉದ್ಯಮಶೀಲರಿಂದ ಅನುಭವ ಹಂಚುವಿಕೆ.